# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 178 | Pages. 2 | Date: 23-05-2025, FRIDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 178 - ಪುಟಗಳು : 2 - 23 ಮೇ 2025 ಶುಕ್ರವಾರ Ph: 8762954248 ದರ : ₹1


# ಮುಂಗಾರು ಪ್ರಾರಂಭ: ರಕ್ಷಣಾ ಕಾರ್ಯಾಚರಣೆಗೆ ಸನ್ನದ್ಧರಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಮುಂಗಾರು ಪ್ರಾರಂಭವಾಗಿದ್ದು, ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಮಳೆಯಾಗುವ ನಿರೀಕ್ಷೆ ಇರುವುದರಿಂದ ಯಾವುದೇ ಅನಾಹುತಗಳು ಸಂಭವಿಸದಂತೆ ಮುನ್ನೆಚ್ಚರಿಕೆವಹಿಸಿ ರಕ್ಷಣಾ ಕಾರ್ಯಾಚರಣೆಗೆ ಸನ್ನದ್ಧರಾಗಿರುವಂತೆ ಜಿಲ್ಲಾಧಿಕಾರಿ ಸತ್ಯಭಾಮ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಜಿಲ್ಲಾ ವಿಪತ್ತು ಪ್ರಾಧಿಕಾರದ ಸಭೆ ನಡೆಸಿ ಮಾತನಾಡಿದ ಅವರು ಪ್ರತಿ ತಾಲ್ಲೂಕಿನಲ್ಲಿ ಕಂಟ್ರೋಲ್ ರೂಂ ಕ್ರಿಯಾಶೀಲವಾಗಿದ್ದು, ದಿನದ 24 ಗಂಟೆಯೂ ಕಾರ್ಯನಿರ್ವಹಿಸುವಂತೆ ಇರಬೇಕು ಎಂದು ಸೂಚಿಸಿದರಲ್ಲದೆ, ಐ.ಎಂ.ಡಿ ಮುನ್ಸೂಚನೆಯಂತೆ ಸಾರ್ವಜನಿಕರಿಗೆ ಹವಾಮಾನ ವರದಿ ಜೊತೆಗೆ ಮಳೆ ವಿವರವನ್ನು ನೀಡಬೇಕು ಎಂದು ತಿಳಿಸಿದರು.



**24/7 ಕಂಟ್ರೋಲ್ ರೂಂ**

## ಜಿಲ್ಲಾಧಿಕಾರಿ ಸತ್ಯಭಾಮ ಸೂಚನೆ

ಕಳೆದ ವರ್ಷ ಸಂಭವಿಸಿರುವ ಘಟನೆಗಳನ್ನು ಅವಲೋಕಿಸಿ ಸಾವು ನೋವುಗಳು ಸಂಭವಿಸದಂತೆ ಎಚ್ಚರವಹಿಸಿ, ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಸಿಡಿಲಿನಿಂದ ಸಂಭವಿಸುವ ಮಾನವ ಮತ್ತು ಜಾನುವಾರು ಜೀವ ಹಾನಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತೀ ಗ್ರಾಮ ಪಂಚಾಯಿತಿ ಹಾಗೂ ರೈತ ಸಂಪರ್ಕ ಕೇಂದ್ರಗಳಲ್ಲಿ ಸರ್ಕಾರದ ಸುತ್ತೋಲೆಯಂತೆ ಅರಿವು ಮೂಡಿಸಲು ಕ್ರಮಕೈಗೊಳ್ಳಲು ನಿರ್ದೇಶನ ನೀಡಿದರು.

ನಗರ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಳೆಯ ನೀರು ಸರಾಗವಾಗಿ ಹರಿದು ಹೋಗುವಂತೆ ರಾಜಕಾಲುವೆ ಮತ್ತು ಚರಂಡಿಗಳನ್ನು ಸ್ವಚ್ಛಗೊಳಿಸಲು ಕ್ರಮಗೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ಮಳೆ ನೀರು ನುಗ್ಗದಂತೆ

ಎಚ್ಚರವಹಿಸಬೇಕು ಎಂದ ಅವರು ನೀರು ನಿಲ್ಲುವುದರಿಂದ ಸೊಳ್ಳೆಗಳು ಉತ್ಪತ್ತಿಯಾಗಿ ರೋಗಕ್ಕೆ ದಾರಿಯಾಗುತ್ತದೆ ಈ ನಿಟ್ಟಿನಲ್ಲಿ ಎಲ್ಲಿಯೂ ನೀರು ನಿಲ್ಲದಂತೆ ನೋಡಿಕೊಳ್ಳುವುದರ ಜೊತೆಗೆ ಸ್ವಚ್ಛತೆಗೆ ಆಧ್ಯತೆ ನೀಡುವಂತೆ ತಿಳಿಸಿದರು.

ಕಳೆದಬಾರಿ ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ, ಹಾರ್ಲೆಯಲ್ಲಿ ಭೂಕುಸಿತವಾಗಿದ್ದು, ಈ ಪ್ರದೇಶಗಳಲ್ಲಿ ಭೂ ಕುಸಿತ ಮರುಕಳಿಸದಂತೆ ನಿಗಾವಹಿಸಲು ಹಾಗೂ ಬೂವನಹಳ್ಳಿ ಬೈಪಾಸ್ ಬಳಿ ಕಾಮಗಾರಿಯನ್ನು ಪೂರ್ಣಗೊಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು.

**ಜಲಪಾತಗಳಿಗೆ ಭೇಟಿ ನಿರ್ಬಂಧ**

ಈ ಬಾರಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿರುವ ಜಲಾಶಯಗಳು ಮತ್ತು ಕಿರು ಜಲಪಾತಗಳಲ್ಲಿ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಬೇಕು ಜೊತೆಗೆ ಅಗತ್ಯ ಭದ್ರತಾ ಸಿಬ್ಬಂದಿ ಇರುವಂತೆ ನೋಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಗ್ನಿಶಾಮಕ ದಳದವರು ಸಕಲ ಸಲಕರಣೆಗಳೊಂದಿಗೆ ಸಿದ್ಧರಾಗಿರುವಂತೆ ಸೂಚನೆ ನೀಡಿದರು.

ಮಳೆ-ಗಾಳಿಯಿಂದ ಬೀಳುವ ಹಂತದಲ್ಲಿರುವ ದುರ್ಬಲವಾದ ವಿದ್ಯುತ್ ಕಂಬ ಮತ್ತು ತಂತಿಗಳನ್ನು ಗುರುತಿಸಿ ವ್ಯವಸ್ಥಿತವಾಗಿರುವಂತೆ ನೋಡಿಕೊಳ್ಳುವಂತೆ ಸೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ಮಳೆಯಿಂದ ವಿದ್ಯುತ್ ಸಂಪರ್ಕ ಕಡಿತಗೊಂಡಾಗ ತಕ್ಷಣ ಕ್ರಮವಹಿಸಿ, ಪುನಃ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮವಹಿಸುವಂತೆ ತಿಳಿಸಿದ ಅವರು ವಿಶೇಷವಾಗಿ ಆನೆ ಓಡಾಡುವ ಪ್ರದೇಶಗಳಲ್ಲಿ ನಿಗಾವಹಿಸಲು ತಿಳಿಸಿದರು.

ಮಳೆಗಾಳಿಯಿಂದ ಬೀಳುವ ಹಂತದಲ್ಲಿರುವ ಒಣಗಿದ ಮರಗಳು ಹಾಗೂ ಕೊಂಬೆಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮವಹಿಸುವಂತೆ ತಿಳಿಸಿದರು.

ರಸ್ತೆಗಳು ಸುಸ್ಥಿಯಲ್ಲಿರುವ ಬಗ್ಗೆ ಗಮನಹರಿಸಿ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹಿಂದಿನ ವರ್ಷ ಎಲ್ಲೆಲ್ಲಿ ನೆರೆಹಾವಳಿ ಸಂಭವಿಸಿದೆ ಅಂತಹ ಕಡೆಗಳಲ್ಲಿ ಎಚ್ಚರವಹಿಸಿ, ಕಾಳಜಿ ಕೇಂದ್ರಗಳನ್ನು ತೆರೆಯಲು ಸ್ಥಳ ಗುರುತಿಸಿಟ್ಟುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತೀ ತಾಲ್ಲೂಕು ವ್ಯಾಪ್ತಿಯಲ್ಲಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದರ ಕುರಿತು ಸಭೆ ನಡೆಸಿ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ತಿಳಿಸಿದರಲ್ಲದೆ, ಈಜುಗಾರರ ಪಟ್ಟಿ, ಸ್ವಯಂ ಸೇವಕರ ಪಟ್ಟಿ ಈ ಎಲ್ಲಾ ಮಾಹಿತಿಗಳು ಕಂಟ್ರೋಲ್ ರೂಂ ನಲ್ಲಿರಬೇಕು ಎಂದು ತಿಳಿಸಿದರು.

ತುರ್ತು ಪರಿಸ್ಥಿಯನ್ನು ನಿಭಾಯಿಸಲು ಪ್ರತೀ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಿಗಳ ದಾಸ್ತಾನು ಇರುವಂತೆ ನೋಡಿಕೊಳ್ಳುವುದರ ಜೊತೆಗೆ ಸಾರ್ವಜನಿಕರಿಗೆ ಸ್ಪಂದಿಸಿ ನಿಗಧಿತ ಅವಧಿಯಲ್ಲಿ ಸೇವೆ ದೊರಕುವಂತೆ ಎಚ್ಚರವಹಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು.

ಗ್ರಾಮೀಣ ಮಟ್ಟದಲ್ಲಿ ಗ್ರಾಮ ಲೆಕ್ಕಿಗರು ಎಲ್ಲಾ ಸಂದರ್ಭಗಳಲ್ಲಿಯೂ ಲಭ್ಯವಿರಬೇಕು ಎಂದ ಅವರು ಅಧಿಕಾರಿ ಹಾಗೂ ಸಿಬ್ಬಂದಿಗಳೆಲ್ಲರೂ ಕೇಂದ್ರ ಸ್ಥಾನದಲ್ಲಿಯೇ ಇರಬೇಕು, ಯಾರಿಗೂ ರಜೆ ನೀಡಬಾರದು ಎಂದು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ ಹಾಗೂ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

# ಶಂಭುನಾಥ ಶ್ರೀಗಳ ಅಭಿನಂದನೆ



ಅಂತಾರಾಷ್ಟ್ರೀಯ ಮಾನ್ಯತೆ ಹೊಂದಿರುವ ಪ್ರತಿಷ್ಠಿತ ಬುಕರ್ ಪ್ರಶಸ್ತಿ ಪಡೆದು ಕನ್ನಡ ಸಾರಸ್ವತ ಲೋಕಕ್ಕೆ ಅತಿದೊಡ್ಡ ಕೊಡುಗೆಯಾಗಿರುವ, ಹಾರ್ಟ್ ಲ್ಯಾಂಪ್ ಮೂಲಕ ಕನ್ನಡದ ಬೆಳಕನ್ನು ಸಾಗರದಾಚೆಗೆ ತಲುಪಿಸಿ ಕನ್ನಡಿಗರಾದ ನಮ್ಮೆಲ್ಲರ ಹೆಮ್ಮೆಯಾಗಿ ದೇಶಕ್ಕೆ ಕೀರ್ತಿ ತಂದಿರುವ ನಮ್ಮ ಹಾಸನ ಜಿಲ್ಲೆಯ ಮಗಳು ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠವು ಶುಭಾಶೀರ್ವಾದ ಮತ್ತು ಹೃತ್ಪೂರ್ವಕ ಅಭಿನಂದನೆಯನ್ನು ಸಂಭ್ರಮದಿಂದ ತಿಳಿಸುತ್ತದೆ.

**ಶ್ರೀ ಶಂಭುನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಹಾಸನ ಮತ್ತು ಕೊಡಗು.**

# ರಾಜೀವ್‌ಗಾಂಧಿ ಪುಣ್ಯಸ್ಮರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಕಾಂಗ್ರೆಸ್ ಭವನದಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯ ಸ್ಮರಣೆ ಅಂಗವಾಗ ಪಕ್ಷದ ಮುಖಂಡರು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರ ಸಾಧನೆ ನೆನೆದರು. ಈ ವೇಳೆ ಮಾತನಾಡಿದ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ದೇವರಾಜೇಗೌಡ, ನಮ್ಮ ದೇಶದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ 34ನೇ ವರ್ಷದ ಪುಣ್ಯ ಸ್ಮರಣೆಯನ್ನು ಕಾಂಗ್ರೆಸ್ ಭವನದಲ್ಲಿ ಆಚರಿಸಲಾಗುತ್ತಿದೆ ಎಂದರು.

ದೇಶದ ಆರನೇ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿ ಅವರು ದೇಶದಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ತಾಯಿ ಇಂದಿರಾ ಗಾಂಧಿ ಅವರ ಮರಣದ ನಂತರ ರಾಜೀವ್ ಗಾಂಧಿ 40ನೇ ವಯಸ್ಸಿಗೆ ಪ್ರಧಾನಿ ಆದರು. ಅವರ ಆಡಳಿತ, ದೇಶಕ್ಕೆ



ಕೊಟ್ಟಂತಹ ಕೊಡುಗೆ ಅವಿಸ್ಮರಣೀಯ ಎಂದರು. ಮೊಬೈಲ್, ಕಂಪ್ಯೂಟರ್, ಟಿವಿ ಎಲ್ಲವನ್ನೂ ದೇಶಕ್ಕೆ ಪರಿಚಯ ಮಾಡಿದವರು ರಾಜೀವ್ ಗಾಂಧಿ. ಇಂತಹ ವ್ಯಕ್ತಿಯನ್ನು ಕಳೆದುಕೊಂಡಿರುವುದು ಶೋಚನಿಯ. ನಮ್ಮ ಪಕ್ಷದ ಪ್ರತಿ ಮುಖಂಡರು, ಕಾರ್ಯಕರ್ತರು, ನಾಗರಿಕರು ನೆನಪಿಸಿಕೊಳ್ಳಲೇಬೇಕು ಎಂದು ಹೇಳಿದರು. ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಶರ್ಮಾ, ಬ್ಲಾಕ್ ಅಧ್ಯಕ್ಷ ಚಂದ್ರಶೇಖರ್, ರವಿಕುಮಾರ್, ಬೂದೇಶ್, ಶೇಖರಪ್ಪ, ಶಿವಕುಮಾರ್ ಇತರರಿದ್ದರು.

# ನಗರದಲ್ಲಿ ಬುಕರ್ ಪ್ರಶಸ್ತಿ ಸಂಭ್ರಮಾಚರಣೆ

**ಕನ್ನಡ ಪೋಸ್ಟ್ ನ್ಯೂಸ್**

ಹಾಸನ: ನಮ್ಮೆಲ್ಲರ ಜನಪರ ಕಾಳಜಿ ಇರುವ ಒಡನಾಡಿ, ಸಾಹಿತಿ, ವಕೀಲರಾದ ಬಾನುಮುಷ್ತಾಕ್ ಅವರಿಗೆ ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಬಂದ ಹಿನ್ನಲೆಯಲ್ಲಿ

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆವರಣದಲ್ಲಿ ಜಿಲ್ಲಾ ಜನಪರ ಚಳುವಳಿಗಳ ಒಕ್ಕೂಟದಿಂದ ಗುರುವಾರ ನೂರಾರು ಮಂದಿ ಸಾರ್ವಜನಿರು, ಸಂಘ-ಸಂಸ್ಥೆಗಳ ಮುಖಂಡರು, ಸದಸ್ಯರು ಜಯಘೋಷ ಮೊಳಗಿಸಿದರು.

ಮೊದಲು ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಹೂವಿನ ಮಳೆಗರೆದರು. ನಂತರ ಬಾನು ಮುಷ್ತಾಕ್ ಅವರ ಅನುವಾದಿತ

ಹಾರ್ಟ್ ಲ್ಯಾಂಪ್ ಕೃತಿಗೆ ಬುಕರ್ ಪ್ರಶಸ್ತಿ ಬಂದಿರುವುದಕ್ಕೆ ಸಂಭ್ರಮಿಸಿ ಸಿಹಿ ಹಂಚಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಜನಪರ ಚಳುವಳಿಗಳ ಒಕ್ಕೂಟದ ಧರ್ಮೇಶ್, ಬಾನುಮುಷ್ತಾಕ್ ಅವರು



ಆರಂಭದಿಂದಲೂ ಜನಪರ, ರೈತ, ದಲಿತ ಹಾಗೂ ಕಾರ್ಮಿಕ ಚಳುವಳಿ ಜೊತೆ ಸಂಬಂಧ ಇಟ್ಟುಕೊಂಡವರು. ಸಾಮಾಜಿಕ ಒಡನಾಟವೇ ಅವರ ಸಾಹಿತ್ಯದಲ್ಲಿ ಸಾಮಾಜಿಕ ವಿಚಾರ ಮೂಡಲು ಸಹಕಾರಿ ಆಗಿದೆ. ಅವರಿಗೀಗ ಅಂತಾರಾಷ್ಟ್ರೀಯ ಪ್ರಶಸ್ತಿ ಬಂದಿರುವುದು ನಮಗೆಲ್ಲಾ ಸಂಭ್ರಮ. ಅವರು ಬಂದ ನಂತರ ನಾಗರಿಕ ಸನ್ಮಾನ ಮಾಡಲಾಗುವುದು ಎಂದರು

ಅವರ ಮೂಲಕ ಹಾಸನಕ್ಕೆ ಮತ್ತೊಮ್ಮೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಬಂದಿದೆ. ನೆರೆಯ ಜಿಲ್ಲೆ ಕೊಡಗಿನ ದೀಪಾ ಭಾಸ್ತಿ ಮತ್ತು ಬಾನು ಮುಷ್ತಾಕ್ ಅವರಿಂದ ಕನ್ನಡಕ್ಕೆ ಮೊದಲ ಬಾರಿಗೆ ಬುಕರ್ ಗೌರವ ಸಿಕ್ಕಿದೆ. ಇದೊಂದು ಬಹಳ ದೊಡ್ಡ ಸಾಧನೆ. ಇಡೀ ದೇಶ ಸಂಭ್ರಮಿಸುತ್ತಿದೆ. ಜಿಲ್ಲೆಯಲ್ಲೂ ಸಂಭ್ರಮ ಮನೆ ಮಾಡಿದೆ ಎಂದರು.

ಹಿರಿಯ ಸಾಹಿತಿ ರೂಪ ಹಾಸನ್ ಮಾತನಾಡಿ, ಇವತ್ತು ಇಡೀ ಹಾಸನದ ಜನರಿಗೆ ತುಂಬಾ ಸಂತೋಷದ ದಿನವಾಗಿದೆ. ಕಳೆದ ವರ್ಷ ಇದೇ ಸಂದರ್ಭದಲ್ಲಿ ಅತ್ಯಂತ ನೋವು ಸಂಕಟದ ಸನ್ನಿವೇಶ ಇದ್ದದ್ದು ಎಲ್ಲರಿಗೂ ನೆನಪಿದೆ. ಅಂದು ಹಾಸನ, ಬೇಡವಾದ ಕಾರಣಕ್ಕೆ ಸುದ್ದಿಯಲ್ಲಿತ್ತು. ಆದರೆ ಈ ವರ್ಷ ನಿಜವಾಗಿ ಹಾಸನದ ಘನತೆ ಏನು, ಅದರ ಗೌರವ ಏನು, ಸಾಧನೆ ಏನು ಎಂಬುದು ಸಾಬೀತಾಗಿದೆ. ಬಾನುಮುಷ್ತಾಕ್ ಮತ್ತು ದೀಪಾ ಭಾಸ್ತಿ ಅವರು ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ಪಡೆದುಕೊಂಡು ಸಮಸ್ತ ಕನ್ನಡಿಗರಿಗೆ ಹೆಮ್ಮೆ ತಂದಿದ್ದಾರೆ ಎಂದರು.

ಬಾನು ಮುಷ್ತಾಕ್ ಅವರು ತವರಿಗೆ ಬಂದ ನಂತರ ವಿಜೃಂಭಣೆ ಮತ್ತಷ್ಟು ಇಮ್ಮಡಿಗೊಳ್ಳಲಿದೆ. ಇಬ್ಬರು ಮಹಿಳೆಯರ ಮೂಲಕ ನಮ್ಮ ಜಿಲ್ಲೆ, ನಾಡು, ದೇಶಕ್ಕೆ ದೊಡ್ಡ

ಹೆಮ್ಮೆ, ಗೌರವ ಸಿಕ್ಕಿದೆ. ಒಬ್ಬ ಮುಸ್ಲಿಂ ಹೆಣ್ಣು ಮಗಳು ಹೊರಗೆ ಬಂದು ಇಷ್ಟೆಲ್ಲಾ ಸಾಧನೆ ಮಾಡುವುದು, ವಕೀಲೆ ವೃತ್ತಿಯಲ್ಲಿ ತೊಡಗುವುದು, ಸಾಮಾಜಿಕ ಹೋರಾಟದಲ್ಲಿ ಭಾಗಿಯಾಗುವುದು ಅಪರೂಪ, ಅತ್ಯದ್ಭುತ. ಬಾನುಮುಷ್ತಾಕ್ ಏರಿದ ಎತ್ತರ ಎಲ್ಲಾ ಲೇಖಕಿಯರಿಗೂ ಸ್ಫೂರ್ತಿ ಕೊಡುವ ವಿಷಯ ಎಂದು ಶ್ಲಾಘಿಸಿದರು.

ಪುರುಷ ಪ್ರಧಾನ, ಧಾರ್ಮಿಕ ಮತಾಂಧತೆ ಹೊಂದಿರುವ ಸಮಾಜದಲ್ಲಿ ಈಗಲೂ ಹೆಣ್ಣು ಮಕ್ಕಳನ್ನು ಕೀಳಾಗಿ ನೋಡುತ್ತಿದ್ದು, ಅದನ್ನು ಮೆಟ್ಟಿನಿಂತು, ನಿರ್ಲಕ್ಷ್ಯ ಮಾಡುವವರಿಗೆ ದೊಡ್ಡ ಉತ್ತರ ಎಂಬಂತೆ ಅತ್ಯಂತ ಎತ್ತರಕ್ಕೆ ಏರಿ ಸಾಬೀತು ಮಾಡಿರುವ ಬಾನುಮುಷ್ತಾಕ್ ಅವರನ್ನು ಅಭಿನಂಧಿಸಬೇಕು ಎಂದರು.

ಹಸೀನಾ ಮತ್ತು ಇತರೆ 12 ಕತೆಗಳ ಸಂಕಲನವನ್ನು ಆಂಗ್ಲಭಾಷೆಗೆ ಅನುವಾದಿಸಿದ ದೀಪಾ ಭಾಸ್ತಿ ಕೂಡ ಅಭಿನಂದನಾರ್ಹರು. ಇವರಿಬ್ಬರು ಇನ್ನೂ ಹೆಚ್ಚಿನ ಸಾಧನೆ ಮಾಡಲಿ ಎಂದು ಆಶಿಸಿದರು. ಈ ವೇಳೆ ಕೆ.ಟಿ.ಶಿವಪ್ರಸಾದ್, ಕೆ.ಟಿ.ಜಯಶ್ರೀ, ಹೆಚ್.ಕೆ.ಸಂದೇಶ್, ಕೃಷ್ಣದಾಸ್ ,ಸುವರ್ಣ, ಡಾ.ರಂಗಲಕ್ಷ್ಮಿ, ಬಿ.ಎನ್ .ಜಯರಾಂ, ಚಲಂ ಹಾಡ್ಲಹಳ್ಳಿ, ಹೆತ್ತೂರು ನಾಗರಾಜ್, ಬನವಾಸೆ ಮಂಜು, ಪೃಥ್ವಿ, ಇರ್ಷಾದ್ ಅಹಮದ್ ದೇಸಾಯಿ, ಅರವಿಂದ್, ಗ್ಯಾರಂಟಿ ರಾಮಣ್ಣ ಮೊದಲಾದವರಿದ್ದರು.

# ಅತ್ಯಾಚಾರ ಕೇಸ್: ಮನು ಖಾಕಿ ವಶಕ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಮಡೆನೂರು ಗ್ರಾಮದ, ಕಾಮಿಡಿ ಕಿಲಾಡಿಗಳು ಶೋ ಮೂಲಕ ಖ್ಯಾತಿ ಪಡೆದಿರುವ ಕಲಾವಿದ ಮಡೆನೂರು ಮನು ಅವರನ್ನು ಅತ್ಯಾಚಾರ ಆರೋಪ ಪ್ರಕರಣದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಹಿಳೆಯೊಬ್ಬರು ನೀಡಿದ ದೂರಿನ ಮೇಲೆ ಮನು ಅವರನ್ನು ಶಾಂತಿಗ್ರಾಮದ ಬಳಿಯ ಮಡೆನೂರಿನಲ್ಲಿ ಮನು ಅವರನ್ನು ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರ ಪೊಲೀಸರು ವಶಕ್ಕೆ ಪಡೆದು, ಕರೆದುಕೊಂಡು ಹೋಗಿದ್ದಾರೆ. ವಿಚಾರಣೆ ಬಳಿಕ ನ್ಯಾಯಾಧೀಶರ ಮುಂದೆ ಹಾಜರುಪಡಿಸುವ ಸಾಧ್ಯತೆ ಇದೆ.

ಅತ್ಯಾಚಾರ ಆರೋಪ ಸಂಬಂಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಮನು ವಿರುದ್ಧ ಎಫ್ ಐಆರ್ ದಾಖಲಾಗಿದೆ.

ಕಿರುತೆರೆ ನಟಿಯೊಬ್ಬರು ಇವರ ವಿರುದ್ಧ ಈ ರೀತಿಯ ಗಂಭೀರ ಆರೋಪ ಹೊರಿಸಿದ್ದಾರೆ. ಕಾಮಿಡಿ ಕಿಲಾಡಿಗಳು ಶೋನಲ್ಲಿ ಎಲ್ಲರನ್ನೂ ನಗಿಸಿ ಮಡೆನೂರು ಮನು ಫೇಮಸ್ ಆಗಿದ್ದರು. ಕುಲದಲ್ಲಿ ಕೀಳ್ಯಾವುದೋ ಚಿತ್ರದ ನಾಯಕನಾಗಿ ಮಡೆನೂರು ಮನು ಅವರು ನಟಿಸಿದ್ದಾರೆ.

ಈ ಚಿತ್ರ ಮೇ 23ರಂದು ಹಾಸನ ಸೇರಿದಂತೆ ರಾಜ್ಯಾದ್ಯಂತ ಬಿಡುಗಡೆ



ಆಗುತ್ತಿದೆ. ಅದಕ್ಕೂ ಮೊದಲೇ ಅವರ ವಿರುದ್ಧ ಈ ರೀತಿಯ ಗಂಭೀರ ಆರೋಪ ಒಂದು ಕೇಳಿ ಬಂದಿದೆ. ಈ ಸಂದರ್ಭದಲ್ಲಿಯೇ ಈ ರೀತಿ ಆಗಿರೋದು ಮನುಗೆ ಮಾತ್ರವಲ್ಲ, ಇಡೀ ತಂಡಕ್ಕೆ ಹಿನ್ನಡೆ ಆಗಲಿದೆ.

**ಆರೋಪವೇನು:** 2018ರಲ್ಲಿ ಪರಿಚಯ ಆದ ಯುವತಿ ಮೇಲೆ ಮಡೆನೂರು ಮನು ಅತ್ಯಾಚಾರ ಮಾಡಿದ್ದಾರೆ ಎಂಬುದು ಸದ್ಯದ ಆರೋಪ.

ಆರೋಪ ಮಾಡಿರುವ ಯುವತಿ ಹಾಗೂ ಮನು, ಕಾಮಿಡಿ ಕಿಲಾಡಿಗಳು ಶೋನಲ್ಲಿ ಒಟ್ಟಾಗಿ ಕೆಲಸ ಮಾಡಿದ್ದರು.

ಅತ್ಯಾಚಾರದಿಂದ ತಾವು ಎರಡು ಬಾರಿ ಪ್ರೆಗ್ನೆಂಟ್ ಆಗಿದ್ದಾಗಿಯೂ ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ. ಈ ದೂರು ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

2018ರಲ್ಲಿ ಮನು ಹಾಗೂ ಯುವತಿ ಮಧ್ಯೆ ಪರಿಚಯ ಬೆಳೆಯಿತು. ಯುವತಿಗೆ ಬಾಡಿಗೆ ಮನೆಯನ್ನು ಮನುನೇ ಹುಡುಕಿಕೊಟ್ಟಿದ್ದ. ಕಾಮಿಡಿ ಕಿಲಾಡಿಗಳು ಶೋನಲ್ಲಿ ಇಬ್ಬರೂ ಒಟ್ಟಾಗಿ ಕಾಣಿಸಿಕೊಂಡಿದ್ದರು. ಯುವತಿ ಜೊತೆ ಆಪ್ತತೆ ಬೆಳೆಸಿಕೊಂಡಿದ್ದ ಮನುಗೆ ಆಗಲೇ ಮದುವೆ ಆಗಿ ಒಂದು ಮಗು ಕೂಡ ಇತ್ತು. ಇಬ್ಬರೂ ಕಾರ್ಯಕ್ರಮ ಒಂದಕ್ಕೆ ತೆರಳಿದ್ದಾಗ ಅತ್ಯಾಚಾರ ನಡೆದಿದೆ ಎಂದು ಯುವತಿ ಆರೋಪಿಸಿದ್ದಾರೆ.

2022, ನ.29 ರಂದು ಶಿವಮೊಗ್ಗದ ಶಿಕಾರಿಪುರದ ಕಾರ್ಯಕ್ರಮಕ್ಕೆ ಮನು ಹಾಗೂ ಯುವತಿ ತೆರಳಿದ್ದರು. ಅಲ್ಲಿ ಒಂದು ಹಾಸ್ಯ ಕಾರ್ಯಕ್ರಮ ಮಾಡಿದ್ದರು. ಕಾರ್ಯಕ್ರಮ ಬಳಿಕ ಸಂಭಾವನೆ ನೀಡೋ ನೆಪದಲ್ಲಿ ಮನು ಯುವತಿಯನ್ನು ರೂಂಗೆ ಕರೆದಿದ್ದರು. ಬಳಿಕ ಯುವತಿ ಮೇಲೆ ಅವರು ಅತ್ಯಾಚಾರ ಮಾಡಿದ್ದಾಗಿ ಎಫ್ ಐಆರ್‌ನಲ್ಲಿ ಉಲ್ಲೇಖ ಆಗಿದೆ.

**ಗುಟ್ಟಾಗಿ ವಿವಾಹ:** ಅತ್ಯಾಚಾರ ಆದ ಬೆನ್ನಲ್ಲೇ ಮನು ಯುವತಿಯನ್ನು ವಿವಾಹ ಕೂಡ ಆಗಿದ್ದರು. ಅದೇ ವರ್ಷ ಡಿ.3ರಂದು ಮನೆಗೆ ಬಂದಿದ್ದ ಮನು, ಬಲವಂತವಾಗಿ ತಾಳಿ ಕಟ್ಟಿದ್ದರಂತೆ. ಆ ಬಳಿಕವೂ ಹಲವು ಬಾರಿ ನನ್ನ ಮೇಲೆ ಅತ್ಯಾಚಾರ ಮಾಡಿದ್ದಾರೆ ಎಂಬುದು ಸಂತ್ರಸ್ತೆಯ ಆರೋಪ.

**ಪ್ರೆಗ್ನೆಂಟ್ ಆದೆ:** ಅತ್ಯಾಚಾರದ ಬಳಿಕ ಸಂತ್ರಸ್ತೆ ಪ್ರೆಗ್ನೆಂಟ್ ಆದರು. ಮನು ಗರ್ಭಪಾತ ಆಗುವ ಮಾತ್ರೆ ನೀಡಿದ್ದರು. ಇದಾದ ಬಳಿಕವೂ ಸಂತ್ರಸ್ತೆ ಮತ್ತೊಮ್ಮೆ ಗರ್ಭಿಣಿ ಆಗಿದ್ದರು. ಎರಡನೇ ಬಾರಿಯೂ ಮನು ಗರ್ಭಪಾತ ಮಾಡಿಸಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

**ನನ್ನನ್ನು ಬಳಸಿಕೊಂಡಿದ್ದಾರೆ:** ಬಾಡಿಗೆ ಮನೆಯಲ್ಲಿ ಹಲವು ಬಾರಿ ಲೈಂಗಿಕವಾಗಿ ಬಳಸಿಕೊಂಡಿದ್ದಾರೆ. ಫೋನ್‌ನಲ್ಲಿ ವಿಡಿಯೋ ಮಾಡಿಟ್ಟುಕೊಂಡಿದ್ದಾನೆ.

ವಿಚಾರ ಯಾರಿಗಾದ್ರೂ ಹೇಳಿದರೆ ಕೊಲೆ ಮಾಡೋದಾಗಿ ಬೆದರಿಕೆ ಹಾಕಿದ್ದಾನೆ. ಜೊತೆಗೆ ಲಕ್ಷಾಂತರ ರೂ.ಹಣ ಕೂಡ ನೀಡಿದ್ದೇನೆ. ಈತನ ವಿರುದ್ಧ ಕಾನೂನು ಕ್ರಮ ಜರುಗಿಸಿ ಯುವತಿ ಕೋರಿದ್ದಾಳೆ.

# ಹೃದಯಾಘಾತ: ಯುವಕ-ಯುವತಿ ಸಾವು

## ಇನ್ನೂ ಬಾಳಿ ಬದುಕಬೇಕಾದ ಎಳೆಯ ಜೀವಗಳನ್ನು ಕಳೆದುಕೊಂಡು ಹೆತ್ತವರು ಕಂಗಾಲು


**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಹೊಳೆನರಸೀಪುರ ಮತ್ತು ಅರಕಲಗೂಡು ತಾಲೂಕುಗಳಲ್ಲಿ ನಡೆದಿರುವ ಎರಡು ಪ್ರತ್ಯೇಕ ಹೃದಯಾಘಾತ ಪ್ರಕರಣಗಳಲ್ಲಿ ಇನ್ನೂ ಬಾಳಿ ಬದುಕಬೇಕಿದ್ದ ಒಂದೇ ವಯಸ್ಸಿನ ಯುವಕ-ಯುವತಿ ಮೃತಪಟ್ಟಿರುವ ಕರುಣಾಜನಕ ಘಟನೆ ನಡೆದಿದೆ.

ಅಭಿಷೇಕ್(19) ಮತ್ತು ಸಂಧ್ಯಾ(19) ಹಠಾತ್ ಜೀವ ಕಳೆದುಕೊಂಡ ನತದೃಷ್ಟರು.

**ಪ್ರಕರಣ-1:** ಅರಕಲಗೂಡು ತಾಲ್ಲೂಕಿನ ಕಾಡನೂರು ಗ್ರಾಮದ ಅನಸೂಯ- ರಾಮಕೃಷ್ಣ ದಂಪತಿ ಪುತ್ರ ಅಭಿಷೇಕ್.ಕೆ.ಆರ್. ಅರ್ಧಕ್ಕೆ ಓದು ನಿಲ್ಲಿಸಿ ಮನೆಯ ಜವಾಬ್ದಾರಿ ಹೊತ್ತಿದ್ದ.

ಇದಕ್ಕಾಗಿ ಬೆಂಗಳೂರಿನಲ್ಲಿ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಎಂದಿನಂತೆ ಬೆಂಗಳೂರಿನ ಬಸವೇಶ್ವರ



ನಗರದಲ್ಲಿ ನಿಂತಿದ್ದ ಜಾಗದಲ್ಲಿ ದಿಢೀರ್ ಕುಸಿದು ಬಿದ್ದಿದ್ದಾನೆ. ಅಲ್ಲಿದ್ದ ಸ್ಥಳೀಯರು ತಕ್ಷಣವೇ ಅಭಿಷೇಕ್‌ನನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಾಗಲೇ ಅಭಿಷೇಕ್ ಇಹಲೋಕ ತ್ಯಜಿಸಿದ್ದ. ಪರೀಕ್ಷಿಸಿದ ವೈದ್ಯರು ಹೃದಯಾಘಾತದಿಂದ ಯುವಕ ಸಾವನ್ನಪ್ಪಿದ್ದಾರೆ ಎಂದು ವೈದ್ಯರು ಖಚಿತ ಪಡಿಸಿದರು.

ಕುಟುಂಬ ಸದಸ್ಯರಿಗೆ ಆಸರೆಯಾಗಿ ರಾಜಧಾನಿಯಲ್ಲಿ ಆಟೋ ಓಡಿಸುತ್ತಿದ್ದ ಅಭಿಷೇಕ್ ಒಂಟಿಯಾಗಿಯೇ ಜೀವ ಬಿಟ್ಟಿರುವುದು ಮನೆ ಮಂದಿಯನ್ನು ಕಣ್ಣೀರ ಕಡಲಲ್ಲಿ ಮುಳುಗಿಸಿದೆ.

**ಪ್ರಕರಣ-2:** ಹೊಳೆನರಸೀಪುರ ಪಟ್ಟಣದ ಮಡಿವಾಳ ಬಡಾವಣೆಯ ನಿವಾಸಿ ಟೈಲರ್ ವೃತ್ತಿ ಮಾಡುವ ವೆಂಕಟೇಶ್-ಪೂರ್ಣಿಮಾ ದಂಪತಿ ಪುತ್ರಿ ಸಂಧ್ಯಾ ಅಂತಿಮ ವರ್ಷದ ಡಿಪ್ಲೊಮಾ ಮುಗಿಸಿದ್ದರು.

ಬೆಳಿಗ್ಗೆ ಬಾತ್‌ರೂಂಗೆ ತೆರಳಿದವಳು, ಕೆಲ ಸಮಯ ಕಳೆದರೂ ಹೊರಗೆ ಬಂದಿರಲಿಲ್ಲ. ಇದರಿಂದ ಅನುಮಾನಗೊಂಡ ಪೋಷಕರು,ಬಾತ್ ರೂಂ ಬಾಗಿಲು ಒಡೆದಿದ್ದಾರೆ.

ಈ ವೇಳೆ ಸಂಧ್ಯಾ ಬಾತ್‌ರೂಂನಲ್ಲೇ ಕುಸಿದು ಬಿದ್ದಿದ್ದಳು. ತಕ್ಷಣವೇ ಆಕೆಯನ್ನು ಪೋಷಕರು ಹಾಗೂ ನೆರೆ ಹೊರೆಯವರು ಆಸ್ಪತ್ರೆಗೆ ಕರೆದೊಯ್ದರು.

ಆ ಹೊತ್ತಿಗಾಗಲೇ ಸಂಧ್ಯಾ ಬಾತ್ ರೂಂನಲ್ಲೇ ಕೊನೆಯುಸಿರೆಳೆದಿದ್ದಳು. ಸಂಧ್ಯಾ ಕೆಲ ವರ್ಷಗಳಿಂದ ಬಿಪಿ-ಶುಗರ್‌ನಿಂದ ಬಳಲುತ್ತಿದ್ದರು ಎಂದು ಪೋಷಕರು ತಿಳಿಸಿದ್ದು, ಅದೇ ಹೃದಯಾಘಾತಕ್ಕೆ ಕಾರಣ ಎನ್ನಲಾಗಿದೆ.

ಇತ್ತೀಚಿನ ದಿನಗಳಲ್ಲಿ ಎಳೆಯ ಜೀವಗಳೂ ಹಠಾತ್ ಹೃದಯಾಘಾತದಿಂದ ಸಾವನ್ನಪ್ಪುತ್ತಿರುವ ದುರಂತ ಪ್ರಕರಣ ಹೆಚ್ಚಾಗುತ್ತಿರುವುದು ಸಹಜವಾಗಿಯೇ ಆತಂಕ ತರಿಸಿದೆ.

# ತಾಳಿ ಕಟ್ಟಿಸಿಕೊಂಡು ಬಿಕಾಂ ಪರೀಕ್ಷೆ ಬರೆದ ನವವಧು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮದುವೆ ಮುಗಿದ ತಕ್ಷಣ ವಧುವಿಗಾಗಲೀ, ವರನಿಗಾಗಲೀ ಅವರ ಆಸೆ-ಆಕಾಂಕ್ಷೆಗಳು, ಧಾವಂತ ಬೇರೆಯದೇ ಇರುತ್ತದೆ. ಇನ್ನೂ ಕೆಲವರು ಮದುವೆ ಅನ್ನೋ ಸಂಭ್ರಮವನ್ನು ಎಲ್ಲರೊಂದಿಗೆ ಕಳೆಯಬೇಕು ಅನ್ನೋ ಆಸೆ ಹೊಂದಿರುತ್ತಾರೆ.

ಆದರೆ ಇಂದು ಹಸಮಣೆ ಏರಿ ತಾಳಿ ಕಟ್ಟಿಸಿಕೊಂಡ ನವ ವಧು ನೇರವಾಗಿ ಪರೀಕ್ಷೆ ಬರೆಯಲು ಬಂದು ಅಚ್ಚರಿ ಮೂಡಿಸಿದರು. ಮಾಂಗಲ್ಯ ಧಾರಣೆ ಮುಗಿಯುತ್ತಿದ್ದಂತೆಯೇ



ಪರೀಕ್ಷಾ ಕೇಂದ್ರಕ್ಕೆ ದೌಡಾಯಿಸಿ ಬಂದು ಪರೀಕ್ಷೆ ಬರೆದರು. ನಗರದ ಚನ್ನಪಟ್ಟಣ ಬಡಾವಣೆಯ ಕುಮಾರ್-ಅನಸೂಯ ದಂಪತಿ ಪುತ್ರಿ ಕವನ ಪರೀಕ್ಷೆ ಬರೆದ ನವವಧು. ಪ್ರೈಡ್ ಪದವಿ ಕಾಲೇಜಿನಲ್ಲಿ ಅಂತಿಮ ಬಿಕಾಂ ಓದುತ್ತಿರುವ ಕವನಾಗೆ, ಇಂದು ಮದುವೆ ನಿಗದಿಯಾಗಿತ್ತು.

ಬೆಳಿಗ್ಗೆ 9 ಗಂಟೆಗೆ ಮುಹೂರ್ತವಿತ್ತು. ಹಾಸನ ಹೊರ ವಲಯದ ಗುಡ್ಡೆನಹಳ್ಳಿಯ ದಿನೇಶ್ ಎಂಬುವರ ಜೊತೆ ಕವನ ವೈವಾಹಿಕ ಜೀವನಕ್ಕೆ ಅಡಿ ಇಟ್ಟರು. ಮದುವೆಯ ದಿನವೇ ಅಂತಿಮ ವರ್ಷದ ಕೊನೆಯ ವಿಷಯ ಪರೀಕ್ಷೆ ಇತ್ತು. ಮಾಂಗಲ್ಯ ಧಾರಣೆ ಆಗುತ್ತಿದ್ದಂತೆಯೇ ಪರೀಕ್ಷೆಗೆ ಹಾಜರಾದ ಕವನಾ, ಪರೀಕ್ಷಾ ಬರೆದರು. ಅಂತಿಮ ವರ್ಷದ ಬಿಕಾಂ ನಲ್ಲಿ ಆದಾಯ ತೆರಿಗೆಗೆ ಸಂಬಂಧಿಸಿದ ಎರಡು ವಿಷಯಗಳ ಪರೀಕ್ಷೆ ಬರೆದರು.

ಮದುವೆ ಮುಗಿದ ಕೂಡಲೇ ಪರೀಕ್ಷೆ ಬರೆಯಲೇಬೇಕೆಂಬ ಮಗಳ ಹಂಬಲಕ್ಕೆ ಆಕೆಯ ಪೋಷಕರು, ಒಡ ಹುಟ್ಟಿದವರು ಸಾಥ್ ನೀಡಿದರು. ಮುಹೂರ್ತ ಮುಗಿದ ಕೂಡಲೇ ಅಣ್ಣ ಕಾರ್ತಿಕ್ ಪರೀಕ್ಷಾ ಕೇಂದ್ರಕ್ಕೆ ಸಹೋದರಿಯನ್ನು ಕರೆದುಕೊಂಡು ಬಂದರು. ಪರೀಕ್ಷೆ ಮುಗಿದ ನಂತರ ಯುವತಿ ಕಲ್ಯಾಣಮಂಟಪಕ್ಕೆ ಮರಳಿ ಆರತಕ್ಷತೆ ಕಾರ್ಯಕ್ರಮದಲ್ಲಿ ಭಾಗಿಯಾದರು.

# ಪರಿಷತ್ತಿನಲ್ಲಿ ಕೇಕ್ ಕತ್ತರಿಸಿ, ಸಿಹಿ ಹಂಚಿ ಸಂಭ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ನಾಡಿನ ಖ್ಯಾತ ಲೇಖಕಿ,ಸಾಹಿತಿ, ಜಿಲ್ಲಾ ಕನ್ನಡ ಸಾಹಿತ್ಯ ಪ;ರಿಷತ್ತಿನ ಮಾರ್ಗದರ್ಶಿ ಸಮಿತಿ ಸದಸ್ಯರಾದ ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ಅಂತರಾಷ್ಟ್ರೀಯ ಬುಕರ್ ಸಾಹಿತ್ಯ ಪಶಸ್ತಿ ದೊರೆತ ಹಿನ್ನಲೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಪರಿಷತ್ತಿಗೆ ವಿದ್ಯುತ್ ದೀಪಾಂಲಕಾರ ಮಾಡಿಸಿ, ಕೇಕ್ ಕತ್ತರಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್ ಮಲ್ಲೇಶಗೌಡ ಅವರು ಬಾನು ಮುಷ್ತಾಕ್ ಅವರ ಪತಿ ಮುಷ್ತಾಕ್ ಹಾಗೂ ಪುತ್ರ ತಾಹೀರ್ ಅವರಿಗೆ ಸಿಹಿ ತಿನ್ನಿಸಿ ಶುಭಾಷಯ ಕೋರಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್ ಮಲ್ಲೇಶಗೌಡ, ಕರುನಾಡು ಇಂದು ಅಭಿಮಾನದಿಂದ ಬೀಗುವಂತಾಗಿದೆ. ಕನ್ನಡ ಭಾಷೆಯ ಮುಕುಟಕ್ಕೆ ವಿಶ್ವದ ಕಿರೀಟ ಪ್ರಾಪ್ತವಾಗಿದೆ. ಬಾನ ಮುಷ್ತಾಕ್ ಅವರು ಕನ್ನಡ ಸಾರಸ್ವತ ಲೋಕದಲ್ಲಿ ಮೇರು ಸಾಧನೆ ಮಾಡಿದ್ದಾರೆ. ಹಾರ್ಟ್ ಲ್ಯಾಂಪ್ ಕೃತಿಗೆ ಬುಕರ್ ದೊರೆಕಿಸಿಕೊಳ್ಳುವ ಮೂಲಕ ಕನ್ನಡಿಗರು ಹೆಮ್ಮೆ ಪಡುವಂತೆ ಮಾಡಿದ್ದಾರೆ. ಅವರು ತವರಿಗೆ ಹಿಂದಿರುಗಿದ ಮೇಲೆ ದೊಡ್ಡ ಅಭಿನಂದನಾ ಸಮಾರಂಭವನ್ನು ಕನ್ನಡ ಸಾಹಿತ್ಯ ಪರಿಷತ್ತು ನಡೆಸಲಿದೆ ಎಂದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ.ಆರ್ ಬೊಮ್ಮೇಗೌಡ ಮಾತನಾಡಿ, ಬಾನು ಮುಷ್ತಾಕ್ ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾರ್ಗದರ್ಶಿ ಸಮಿತಿ ಸದಸ್ಯರಾಗಿರುವುದು ನಮ್ಮ ಸೌಭಾಗ್ಯ. ನಾವು ಪರಿಷತ್ತಿನ ಹಲವು ಕಾರ್ಯಕ್ರಮಗಳಲ್ಲಿ ಅವರನ್ನು ಆಹ್ವಾನಿಸಲು ಅವರ ಮನೆಗೆ ಹೋಗಿದ್ದೇವೆ.

ಅವರದು ಸರಳ ನಡೆ-ನುಡಿ,ಎಲ್ಲರನ್ನು ಬಹಳ ಪ್ರೀತಿಯಿಂದ ಕಾಣುತ್ತಾರೆ ಅವರಿಗೆ ಪ್ರಶಸ್ತಿ ಬಂದಿರುವುದು ಕನ್ನಡಿಗರು ಹೆಮ್ಮೆ ಪಡುವ ಸಂಗತಿ ಎಂದರು.

ಬಾನು ಮುಷ್ತಾಕ್ ಅವರ ಪತಿ ಮುಷ್ತಾಕ್ ಮಾತನಾಡಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಪರಿಷತ್ತಿನಲ್ಲಿ ಕೇಕ್ ಕತ್ತರಿಸಿ, ಸಿಹಿ ಹಂಚಿ ಸಂಭ್ರಮಿಸುತ್ತಿರುವುದು ನಮ್ಮ ಖುಷಿ ಇಮ್ಮಡಿಗೊಳಿಸಿದೆ ಅವರ ಅಭಿಮಾನಕ್ಕೆ ನಾವು ಆಭಾರಿ ಎಂದರು.

ಈ ವೇಳೆ ಬಾನು ಮುಷ್ತಾಕ್ ಪುತ್ರ ತಾಹೀರ್ , ಪರಿಷತ್ತಿನ ಪದಾಧಿಕಾರಿಗಳಾದ ಕಮಲಮ್ಮ, ಮೇಗಳಕೇರಿ ಪ್ರಕಾಶ್, ಸಹ ಕಾರ್ಯದರ್ಶಿ ಎಂ.ಡಿ ನಾಗೇಶ್, ಐಚನಹಳ್ಳಿ ಕೃಷ್ಣಪ್ಪ,ಬನುಮ ಗುರುದತ್ತ, ಕಲಾವಿದ ಯಾಕೂಬ್ ಗೊರೂರು, ಯದೀಶ್, ಪ್ರದೀಪ್ ಇತರರು ಹಾಜರಿದ್ದರು.

# ಯಶಸ್ವಿಯಾದ ಸ್ವಚ್ಛತಾ ಅಭಿಯಾನ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ವಿದ್ಯಾನಗರ ಬಡಾವಣೆಯ ಕುವೆಂಪು ಯುವಕರ ಸಂಘದ ವತಿಯಿಂದ ಬಡಾವಣೆಯ ಪ್ರಮುಖ ರಸ್ತೆಗಳನ್ನು ಸ್ವಚ್ಛಗೊಳಿಸಿ ವಿದ್ಯಾನಗರ ಸ್ವಚ್ಚತಾ ಅಭಿಯಾನ ನೆಡೆಸಲಾಯಿತು.

ವಿದ್ಯಾನಗರ ಬಡಾವಣೆಯ ಬಸ್ ನಿಲ್ದಾಣ ರಸ್ತೆ ಸ್ವಚ್ಚಗೊಳಿಸಿ ಸ್ವಚ್ಚತೆ ಬಗೆಗೆ ಸಾರ್ವಜಿಕರಲ್ಲಿ ಅರಿವು ಮೂಡಿಸಲಾಯಿತು. ಈ ವೇಳೆ ಮಾತನಾಡಿದ ಕುವೆಂಪು ಯುವಕರ ಸಂಘದ ಗೌರವಾಧ್ಯಕ್ಷ ಡಾ.ಜಗದೀಶ್, ಪರಿಸರ ಸ್ವಚ್ಚತೆಯಲ್ಲಿ ಎಲ್ಲರೂ ತಮ್ಮ ಜವಾಬ್ದಾರಿ ಮೆರೆಯಬೇಕು. ಪರಿಸರದ ಬಗೆಗೆ ಮಕ್ಕಳಲ್ಲಿ ಬಾಲ್ಯದಿಂದಲೂ ಜಾಗೃತಿ ಮೂಡಿಸಿ ಅವರನ್ನು ಸಮಾಜದ ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡಬೇಕು ಎಂದರು.

ಸಂಘದ ಅಧ್ಯಕ್ಷ ಹೇಮಂತ್ ಕುಮಾರ್ ಮಾತನಾಡಿ, ಸ್ವಚ್ಚತೆಯನ್ನು ಕಾಪಾಡಿಕೊಂಡರೆ ರೋಗ ರುಜುನಗಳಿಂದ ದೂರ ಇರಬಹುದು ಎಂಬುದು ಎಲ್ಲರಿಗೂ ತಿಳಿದಿದೆ. ಪ್ರತಿಯೊಬ್ಬರು ಪರಿಸರವನ್ನು ಶುಚಿಯಾಗಿಡುವಲ್ಲಿ ಕೈ ಜೋಡಿಸಬೇಕು. ಪ್ರತಿಯೊಬ್ಬ ಪ್ರಜೆಗೂ ಪರಿಸರದ ಸ್ವಚ್ಚತೆ ಕಾಪಾಡಬೇಕಾಗಿ ಅತಿದೊಡ್ಡ ಹೊಣೆ ಇದೆ ಎಂಬುದನ್ನು ಯಾರು ಮರೆಯಬಾರದು ಎಂದರು.

ಪರಿಸರ ಪ್ರೇಮಿ ಹಗರೆ ಅಹಮದ್ ಮಾತನಾಡಿ, ಮನೆಯಲ್ಲಿಯೇ ಕಸವನ್ನು ವ್ಯವಸ್ಥಿತವಾಗಿ ಬೇರ್ಪಡಿಸಿ ಪರಿಸರಕ್ಕೆ ಹಾನಿಯಾಗದಂತೆ ಕಸ ವಿಲೇವಾರಿ ಮಾಡುವ ಕುರಿತಂತೆ ಅರಿವು ಮೂಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ವಿದ್ಯಾನಗರದಲ್ಲಿ ಕಸ ರಹಿತ ಮನೆಗಳನ್ನು ಕಾಣುವ ಸನ್ನಿವೇಶ ಸೃಷ್ಟಿಸಲಾಗುತ್ತಿದೆ ಎಂದರು.

ಈ ವೇಳೆ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ.ಆರ್ ಬೊಮ್ಮೇಗೌಡ, ಕುವೆಂಪು ಯುವಕ ಸಂಘದ ಗಿರೀಶ್, ಸತೀಶ್, ಶ್ರೀನಿವಾಸ್, ಖಜಾಂಚಿ ಚೇತನ್ ಇತರರು ಹಾಜರಿದ್ದರು.

# ಸಮರ್ಪಕ ವಿದ್ಯುತ್ ಪೂರೈಕೆಯಲ್ಲಿ ವಿಫಲ : ರೈತ ಸಂಘ ಪ್ರತಿಭಟನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಕರ್ನಾಟಕ ರಕ್ಷಣಾ ವೇದಿಕೆ, ಕರ್ನಾಟಕ ರಾಜ್ಯ ರೈತ ಸಂಘ, ಗ್ರಾಮ ಪಂಚಾಯಿತಿ ಸದಸ್ಯರು ವಿದ್ಯುತ್ ಸರಬರಾಜು ಅವ್ಯವಸ್ಥೆ ಜೊತೆ ಹಳೇಬೀಡು ಸೆಸ್ಕಾಂನಲ್ಲಿ ಎಂಜಿನಿಯರ್ ಇಲ್ಲದೆ ಕೆಲಸ ವಿಳಂಬವಾಗಿದೆ ಎಂದು ಹಳೇಬೀಡಿನಲ್ಲಿ ಪ್ರತಿಭಟನೆ ನಡೆಸಿದರು

ಅಂಬೆಡ್ಕರ್ ವೃತ್ತದಿಂದ ಸಾಗಿದ ಮೆರವಣಿಗೆ. ಬಸವೇಶ್ವರ ವೃತ್ತಕ್ಕೆ ತಲುಪಿದ ತಕ್ಷಣ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಲಾಯಿತು ಸೆಸ್ಕ್ ಎಂಜಿನಿಯರ್ ಸ್ಥಳಕ್ಕೆ ಆಗಮಿಸಬೇಕು ಎಂದು ಪ್ರತಿಭಟನಾಕಾರರು ಹಠ ಹಿಡಿದರು ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ, ಎಇಇ ಕೆ.ರಾಘವೇಂದ್ರ, ಜೆಇ ಚಂದ್ರಶೇಖರ್ ಸ್ಥಳಕ್ಕೆ ಆಗಮಿಸಿದಾಗ ನೆರದಿದ್ದ ಜನರು ಎಂಜಿನಿಯರ್ಗಳ ವಿರುದ್ಧ ಹರಿಹಾಯ್ದರು. ಹಳೇಬೀಡು ಬೆಸ್ಕಾಂ ನಲ್ಲಿ ಎಂಜಿನಿಯರ್ ಇಲ್ಲದೆ ವಿದ್ಯುತ್ ಸಮಸ್ಯೆ ಬಗೆಹರಿಯುತ್ತಾ ಇಲ್ಲ. ವಿದ್ಯುತ್ ನಿಲುಗಡೆಗೆ ಲೆಕ್ಕವೆ ಇಲ್ಲ. . . ಹಳೇಬೀಡಿನಲ್ಲಿ ಲೈನ್ಮೆನ್ ದೇವರಾಜು ಇಲ್ಲದಿದ್ದರೆ ಸೆಸ್ಕಾಂ ಕಚೇರಿ ಬಾಗಿಲು ಹಾಕಬೇಕಾಗಿತ್ತು . ಹಳೇಬೀಡು ಕಚೇರಿಯ ಎಂಜಿನಿಯರ್ ಹಳೇಬೀಡಿನಲ್ಲಿಯೇ ವಾಸ್ತವ್ಯ ಇರಬೇಕು ಎಂದು ಪ್ರತಿಭಟನಾ ನಿರತರು ಬೇಡಿಕೆ ಇಟ್ಟರು. ನಂತರ ತಹಶಿಲ್ದಾರ್ ಎಂ.ಮಮತ ಸ್ಥಳಕ್ಕೆ ಆಗಮಿಸಿ ಸಾರ್ವಜನಿಕರ ಹಿತ ದೃಷ್ಟಿಯಿಂದ ರಸ್ತೆ ತಡೆ ನಿಲ್ಲಿಸಿ, ಸಮಸ್ಯೆ ಇತ್ಯರ್ಥ ಮಾಡುತ್ತೇವೆ ಎಂದರು. ರಸ್ತೆ ತಡೆ ನಿಲ್ಲಿಸಿದ ಪ್ರತಿಭಟನಾಕಾರರು ಸೆಸ್ಕ್ ಕಚೇರಿಗೆ ಮುತ್ತಿಗೆ ಹಾಕಿದರು. ಕಚೇರಿ ಬಾಗಿಲು ಮುಚ್ಚಿಸಲು ಪ್ರತಿಭಟನಾಕಾರರು ಮುಂದಾದರು. ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ ಬಾಗಿಲು ಮುಚ್ಚುವುದು ಬೇಡ ಸಮಸ್ಯೆ ಬಗೆಹರಿಸುವ ಉದ್ದೇಶದಿಂದ ಆಗಮಿಸಿದ್ದೇವೆ ಎಂದರು. ಹಳೇಬೀಡು ಸೆಸ್ಕ್ ಕಚೇರಿ ಸಮಸ್ಯೆಯನ್ನು 15ದಿನದೊಳಗೆ ಇತ್ಯರ್ಥ ಮಾಡುತ್ತೇವೆ. ಉನ್ನತ ಅಧಿಕಾರಿಗಳೊಂದಿಗೆ ಮಾತನಾಡಿ ಎಂಜಿನಿಯರ್ ನೇಮಕ ಮಾಡುತ್ತೇವೆ ಎಂದು ಹೇಳಿದ ನಂತರ ಪ್ರತಿಭಟನೆ ಕೈ ಬಿಡಲಾಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎಚ್. ಆರ್.ಮಧು ಕರವೇ ಜಿಲ್ಲಾ ಉಪಾಧ್ಯಕ್ಷ ಸೀತಾರಾಮು ಮಾತನಾಡಿದರು ವಿದ್ಯುತ್ ವಿತರಣಾ ಕೇಂದ್ರದ ಸಿಬ್ಬಂದಿ, ಕರವೇ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್, ಪದಾಧಿಕಾರಿಗಳಾದ ಸೀತಾರಾಮು, ಖಾದರ್, ಈಶ್ವರ್ ಪಾಂಡು, ಕೃಷಿ ಪತ್ತಿನ ಸಂಘದ ಅಧ್ಯಕ್ಷ ಎಂ.ಕೆ.ಹುಲೀಗೌಡ, ಮುಖಂಡರಾದ ಎಚ್.ಪರಮೇಶ್, ಹರೀಶ್ ಮಲ್ಲಾಪುರ, ರೈತಸಂಘದ ಎಲ್.ಈ.ಶಿವಪ್ಪ, ಕೆ.ಪಿ.ಕುಮಾರ್, ಶಿವಶಂಕರಪ್ಪ, ಗಡಿ ಕುಮಾರ್ ನೇತೃತ್ವವಹಿಸಿದ್ದರು. ಸಬ್ ಇನ್ಸ್ಪೆಕ್ಟರ್ ಯೋಗಾಂಭರಂ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

# ರಾಜಕಾಲುವೆ ಬಗ್ಗೆ ಆಡಳಿತ ಕುರುಡು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



> ರಾಜ ಕಾಲುವೆ ಒತ್ತುವರಿ ತೆರವು ಹಾಗೂ ನಿರ್ವಹಣೆಗೆ ನಗರಸಭೆ ಆಡಳಿತ ಬದ್ಧವಾಗಿದೆ. ಶೀಘ್ರ ಶಾಸಕರೊಂದಿಗೆ ಸಮಾಲೋಚನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
> **- ಎಂ.ಸಮೀವುಲ್ಲಾ, ನಗರಸಭೆ ಅಧ್ಯಕ್ಷ**

ಅರಸೀಕೆರೆ:ನಗರ ವ್ಯಾಪ್ತಿಯ ಕೆಲವೆಡೆ ರಾಜ್ಯ ಕಾಲುವೆ ಒತ್ತುವರಿ ಯಾಗಿರುವುದು ಜಗಜ್ಜಾಹೀರವಾಗಿದ್ದರೆ ಮತ್ತೆ ಕೆಲವೆಡೆ ಸೂಕ್ತ ನಿರ್ವಹಣೆ ಕಾಣದೆ ರಾಜ ಕಾಲುವೆ ಕ್ರಮೇಣ ಕಣ್ಮರೆ ಯಾಗುತ್ತಿರುವುದು ಆಡಳಿತ ವ್ಯವಸ್ಥೆಯ ಕುರುಡುತನ ಪ್ರಶ್ನಾರ್ಹವಾಗಿದೆ.

ಪ್ರವಹಿಸುವ ಜಲಕ್ಕೆ ನೂರಾರು ಪಾದಗಳು ಎಂಬ ಕವಿವಾಣಿಯನ್ನು ಅರ್ಥಮಾಡಿಕೊಳ್ಳಲಾಗದ ಆಡಳಿತದ ಚುಕ್ಕಾಣಿ ಹಿಡಿದಿರುವವರು ಯುದ್ಧ ಕಾಲದಲ್ಲಿ ಶಸ್ತ್ರಾಭ್ಯಾಸ ಎನ್ನುವಂತೆ ಮಳೆ ಬಂದು ಅವಾಂತರ ಸೃಷ್ಟಿಯಾದಾಗ ಮಾತ್ರ ಇತ್ತ ಗಮನ ಕೊಡುತ್ತಾರೆ, ಬಳಿಕ ಎಲ್ಲವನ್ನೂ ಮರೆತೇ ಬಿಡುತ್ತಾರೆ.

ಹಾಗಾಗಿ ನಗರ ವ್ಯಾಪ್ತಿಯಲ್ಲಿ ಮಳೆಯಾದರೆ ರಾಜ ಕಾಲುವೆ ಮಾರ್ಗವಾಗಿ ನಗರದಿಂದ ಹೊರ ಹೋಗುತ್ತಿದ್ದ ಮಳೆ ನೀರಿಗೆ ಹಲವು ಅಡೆ-ತಡೆ ಇರುವುದರಿಂದ ಅನಿವಾರ್ಯವಾಗಿ ತಮ್ಮ ಹಾದಿಯನ್ನು ಬದಲಿಸಿಕೊಂಡು ರಾಜಾಬೀದಿಗಳಲ್ಲೇ ಹರಿಯುವ ಮೂಲಕ ನಾನಾ ಅವಾಂತರ ಸೃಷ್ಟಿಸುತ್ತಿರುವುದು ಸಾಮಾನ್ಯವಾಗಿದೆ.

ಇನ್ನಾದರೂ ಸಂಬಂಧಪಟ್ಟವರು ಎಚ್ಚೆತ್ತುಕೊಳ್ಳಿ ಎಂಬ ಸಂದೇಶ ನೀಡುತ್ತಿದ್ದರೂ ಚುನಾಯಿತ ಜನಪ್ರತಿನಿಧಿಗಳು ಹಾಗೂ ನಗರಸಭೆ ಆಡಳಿತ ಕಿವಿಗೊಡದೆ ಇರುವುದು ರಾಜ ಕಾಲುವೆಗಳ ಬಗ್ಗೆ ಇವರಿಗಿರುವ ತಾತ್ಸಾರ ಮನೋಭಾವಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ರಾಜ ಕಾಲುವೆ ಒತ್ತುವರಿ ತೆರವು ಮಾಡಬೇಕು ಹಾಗೂ ನಿರ್ವಹಣೆ ಇಲ್ಲದೆ ರಾಜ ಕಾಲುವೆ ನಡುವೆ ಬೆಳೆದು ನಿಂತಿರುವ ಗಿಡ ಗಂಟೆ, ತೆರವು ಗೊಳಿಸಬೇಕು. ಈ ಮೂಲಕ ಮಳೆಗಾಲದಲ್ಲಿ ಮಳೆ ನೀರು ಸರಾಗವಾಗಿ ಸಾಗಲು ನಗರಸಭೆ ಅನುವು ಮಾಡಿಕೊಡಬೇಕು. ಇಲ್ಲದಿದ್ದರೆ ಈಗಾಗಲೇ ಮಳೆಗಾಲ ಆರಂಭವಾಗಿದ್ದು, ಬೇರೆಯದೇ ಪರಿಣಾಮ ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆ ಸಂದೇಶವನ್ನು ಕಳೆದೆರಡು ದಿನಗಳಿಂದ ನಗರದಲ್ಲಿ ಸುರಿದ ಮಳೆ, ನಗರಸಭೆಗೆ ನೀಡಿದೆ. ಮಳೆ ನೀರಿನ ಮಹತ್ವ ಅರಿತಿದ್ದ ನಮ್ಮ ಪೂರ್ವಿಕರು ಮಳೆಗಾಲದಲ್ಲಿ ಸುರಿಯುತ್ತಿದ್ದ ಮಳೆ ನೀರನ್ನು ವ್ಯವಸ್ಥಿತವಾಗಿ ರಾಜಕಾಲುವೆಯ ಮೂಲಕ ಊರ ಹೊರಗೆ ಇರುತ್ತಿದ್ದ ಕೆರೆ ಕಟ್ಟೆಗಳಿಗೆ ಸಂಪರ್ಕ ಕಲ್ಪಿಸಿ ಮಳೆ ನೀರನ್ನು ಸಂಗ್ರಹಿಸಿ ಪುನರ್ಬಳಕೆ ಮಾಡುವ ಜಾಣ್ಮೆ ಅವರಲ್ಲಿತ್ತು.

ಆದರಿಂದು ನಾಗರಿಕತೆಯ ನಾಗಾಲೋಟದಲ್ಲಿ ನಾನೇ ಬುದ್ಧಿವಂತ ಎಂದು ಬಿಗುತ್ತಿರುವ ಮನುಷ್ಯ, ರಾಜ ಕಾಲುವೆ ಮಹತ್ವ ಅರಿಯದೆ ಒತ್ತುವರಿ ಮಾಡಿಕೊಂಡಿದ್ದರೆ, ಅಳಿದುಳಿದ ಕಾಲುವೆಯ ನಿರ್ವಹಣೆ ಮರೆತಿರುವ ನಮ್ಮ ಆಡಳಿತ ವ್ಯವಸ್ಥೆ ಬಗ್ಗೆ ನಮಗೆ ನಾವೇ ನಾಚಿಕೆ ಪಟ್ಟಿಕೊಳ್ಳಬೇಕಾಗಿದೆ ಎನ್ನುತ್ತಾರೆ ಪರಿಸರವಾದಿ ನಿವೃತ್ತ ಪ್ರಾಂಶುಪಾಲ ಡಾ.ಎಚ್.ಆರ್ ಸ್ವಾಮಿ.

# ವಿದೇಶ ಪ್ರವಾಸ ಶುಭ ಹಾರೈಕೆ



ಹಾಸನ: ನಗರದ ಶ್ರೀರಾಂ ಫೈನಾನ್ಸ್ ರೀಜಿನಲ್ ಮ್ಯಾನೇಜರ್ ಆಗಿರುವ ಸಂಜಯ್ ಅವರು ಮೇ 22 ರಿಂದ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದು, ಅವರ ಪ್ರಯಾಣ ಸುಖಕರವಾಗಿರಲಿ ಎಂದು ಸಂಸದರ ಮಾಧ್ಯಮ ಸಂಯೋಜಕರಾದ ಸ್ವರೂಪ್ ಮಳಲಿ, ಸ್ನೇಹಿತರ ಬಳಗ ಹಾಗೂ ಡ್ಯಾಡ್ ಅಂಡ್ ಸನ್ ಕ್ರಿಕೆಟರ್ಸ್ ತಂಡದವರು ಶುಭ ಹಾರೈಸಿದ್ದಾರೆ.

# ಅಪಪ್ರಚಾರ ಮಾಡದಂತೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಕಳೆದ ಹಲವು ವರ್ಷಗಳಿಂದ ಕಾಮಗಾರಿ ಆಗದ ರಸ್ತೆಯನ್ನು ಈಗಿನ ಶಾಸಕರು ಪರಿಶೀಲಿಸಿ ಉತ್ತಮ ರಸ್ತೆ ಮಾಡಿಕೊಟ್ಟಿದ್ದಾರೆ. ಆದರೆ ಹೊಳಲಹಳ್ಳಿ


ವೀರೇಶ್ ಎಂಬುವರು ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಾ, ಮೊಬೈಲ್ ಮೂಲಕ ಗ್ರೂಪಿಗೆ ಹಾಕಿ ಅಪಮಾನ ಮಾಡುತ್ತಿದ್ದು, ಕೂಡಲೇ ಅದನ್ನು ನಿಲ್ಲಿಸುವಂತೆ ತಡಕಲು ಗ್ರಾಮದ ಟಿ.ಆರ್. ಶಿವಕುಮಾರ್ ಮನವಿ ಮಾಡಿದರು.

ಸಕಲೇಶಪುರ ತಾಲೂಕು ಯಸಳೂರು ಹೋಬಳಿ ಹೊಸೂರು ಗ್ರಾಮ ಪಂಚಾಯಿತಿಗೆ ಸೇರಿದ ತಡಕಲು ಗ್ರಾಮಕ್ಕೆ ಕಳೆದ 35-40 ವರ್ಷಗಳಿಂದ ರಸ್ತೆ ಆಗಿರಲಿಲ್ಲ.

ಅಭಿವೃದ್ಧಿಯೂ ಅಷ್ಟಕ್ಕಷ್ಟೆ. ಇದೀಗ ತಡಕಲು ಗ್ರಾಮಕ್ಕೆ ಎಸ್ಸಿ/ಎಸ್ಟಿ ಅನುದಾನದಡಿ ಕಾಮಗಾರಿ ಮಂಜರಾಗಿದ್ದು ದಶಕಗಳಿಂದ ಗ್ರಾಮಕ್ಕೆ ಇಲ್ಲವಾಗಿದ್ದ ರಸ್ತೆ ಕಾಮಗಾರಿ ಬಗ್ಗೆ ಸಿಮೆಂಟ್ ಮಂಜು ಅವರು ಸ್ಥಳ ಪರಿಶೀಲಿಸಿ ರಸ್ತೆ ಕಾಮಗಾರಿ ಮಾಡುವಂತೆ ಸೂಚಿಸಿದರು.

ಅದರಂತೆ ಕಾಮಗಾರಿ ಗುಣಮಟ್ಟದಿಂದ ಆಗಿದೆ. ಆದರೂ ವೀರೇಶ್ ಅವರು ವಾಟ್ಸಾಪ್ ಗ್ರೂಪಿಗೆ ಹಾಕಿ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ದಯಮಾಡಿ ಈ ರೀತಿ ಮಾಡಬಾರದು. ಶಾಸಕರನ್ನ ಕಂಡರೇ ವೀರೇಶ್ ಎಂಬುವವರಿಗೆ ವೈಯಕ್ತಿಕ ದ್ವೇಷ ಇರಬಹುದೇನೊ ನಮಗೆ ಗೊತ್ತಿಲ್ಲ. ಆದರೆ ನಮ್ಮ ಬಗ್ಗೆ ಕೆಟ್ಟದಾಗಿ ಮೆಸೇಜ್ ಹಾಕುವುದನ್ನು ಕೂಡಲೇ ನಿಲ್ಲಿಸಬೇಕೆಂದು ಮನವಿ ಮಾಡಿದರು. ನಮ್ಮ ಗ್ರಾಮದಲ್ಲಿ ಒಟ್ಟು 40 ಕುಟುಂಬಗಳಿದ್ದು, ಇಲ್ಲಿ ಸರಿಯಾಗಿ ಓಡಾಡಲು ರಸ್ತೆಯೇ ಇರಲಿಲ್ಲ. ವೈಯಕ್ತಿಕ ವಿಚಾರ ಏನೇ ಇದ್ದರೂ ಗ್ರಾಮಸ್ಥರನ್ನು ಏಕೆ ಬೀದಿಗೆ ತಂದು ನಮ್ಮನ್ನು ಏಕೆ ಅವಮಾನ ಮಾಡಬೇಕು ಎಂದು ಪ್ರಶ್ನಿಸಿದರು. ಶಾಸಕರು 1 ಕೋಟಿ ವೆಚ್ಚದಲ್ಲಿ ಸಿಮೆಂಟ್ ರಸ್ತೆ ಮಾಡಿಕೊಟ್ಟು ಒಳ್ಳೆ ಕೆಲಸ ಮಾಡಿದ್ದಾರೆ. ಸುಳ್ಳು ಅಪಪ್ರಚಾರ ಮಾಡಬಾರದು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಗ್ರಾಮದ ಸುರೇಶ್, ಲೋಕೇಶ್, ಲಿಂಗರಾಜು, ಕರಣಾಕುಮಾರ್, ಉಮೇಶ್ ಇದ್ದರು.

# ಹಿಮ್ಸ್‌ಗೆ ಒಟ್ಟಿಗೆ ಸೇರಿಸಿ ನಾಮ ನಿರ್ದೇಶಿತ ಸದಸ್ಯರಾಗಿ ರವೀಶ್ ಬಸವಾಪುರ ಆಯ್ಕೆ



ಹಾಸನ : ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಹಿಮ್ಸ್) ಆಡಳಿತ ಪರಿಷತ್‌ಗೆ ಜಿಲ್ಲಾ ಯುವ ಕಾಂಗ್ರೆಸ್‌ನ ಮಾಜಿ ಉಪಾಧ್ಯಕ್ಷ ರವೀಶ್ ಬಸವಾಪುರ ನಾಮ ನಿರ್ದೇಶಿತ ಸದಸ್ಯರಾಗಿ ನೇಮಕ ಗೊಂಡಿದ್ದಾರೆ. ಈ ಕುರಿತು ಮೇ 19 ರಂದು ಆದೇಶ ಹೊರಡಿಸಿರುವ ವೈದ್ಯಕೀಯ ಶಿಕ್ಷಣ ಇಲಾಖೆ ಅಧೀನ ಕಾರ್ಯದರ್ಶಿ ಬಾಲಪ ಆದೇಶ ಹೊರಡಿಸಿದ್ದು, ರವೀಶ್ ಅವರು ಮುಂದಿನ ಮೂರು ವರ್ಷಗಳ ಕಾಲ ನಾಮಿನಿ ಸದಸ್ಯರಾಗಿ ಸೇವೆ ಸಲ್ಲಿಸಲಿದ್ದಾರೆ. ಕಳೆದ ಹಲವು ವರ್ಷಗಳಿಂದ ಯುವ ಕಾಂಗ್ರೆಸ್‌ನಲ್ಲಿ ಸಕ್ರಿಯರಾಗಿ ಸೇವೆ ಸಲ್ಲಿಸುತ್ತಿರುವ ಇವರು, ಸಮಾಜ ಸೇವೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಿಗೆ ಅಭಿಮಾನಿ ಬಳಗದ ಸದಸ್ಯರು ಹಾರ್ದಿಕ ಅಭಿನಂದನೆ ಸಲ್ಲಿಸಿದ್ದಾರೆ.

# ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

## ಮಕ್ಕಳ ರಕ್ಷಣಾ ನಿರ್ದೇಶನಾಲಯ ಕಾಯಂಮೇತರ ನೌಕರರ ಸಂಘ ಮನವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಅನಾಥ, ಪರಿತ್ಯಕ್ತ ಮತ್ತು ಸಂಕಷ್ಟದಲ್ಲಿರುವ ಮಕ್ಕಳ ರಕ್ಷಣೆಗಾಗಿ ಶ್ರಮಿಸುತ್ತಿರುವ ಮಕ್ಕಳ ರಕ್ಷಣಾ ಸಿಬ್ಬಂದಿಯ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ ಕಾಯಂಮೇತರ ನೌಕರರ ಸಂಘದ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಅವರ ಮೂಲಕ ಇಂದು ಬೆಳಗ್ಗೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಮನವಿ ನೀಡಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಕಾಂತರಾಜು,

ಮಕ್ಕಳ ಸಂರಕ್ಷಣೆ ಸಂವಿಧಾನ ಬದ್ಧ ಜವಾಬ್ದಾರಿಯಾಗಿದ್ದು ಸಮಾಜದಲ್ಲಿ ನಿರ್ಲಕ್ಷ್ಯ, ಶೋಷಣೆ, ದೌರ್ಜನ್ಯಗಳಿಗೆ ಒಳಗಾಗಿ ಹಕ್ಕು ಮತ್ತು ಅವಕಾಶಗಳಿಂದ ವಂಚಿತರಾದ ಮಕ್ಕಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಬಾಲನ್ಯಾಯ ಕಾಯ್ದೆ ಜಾರಿಗೊಳಿಸಲಾಗಿದೆ. ಕಾಯ್ದೆ ಅಡಿಯಲ್ಲಿ ಅಸಾಹಯಕ, ಪಾಲನೆ, ಪೋಷಣೆ ಮತ್ತು ರಕ್ಷಣೆಯ ಅವಶ್ಯಕತೆ ಇರುವ ಮಕ್ಕಳು ಹಾಗೂ ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳಿಗೆ ರಕ್ಷಣೆ ಹಾಗೂ ಪುನರ್ವಸತಿ ಒದಗಿಸಲಾಗುತ್ತಿದೆ ಎಂದರು.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ)ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ದೃಷ್ಟಿಯಿಂದ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು, ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

ಜಿಲ್ಲಾ ಹಂತದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ನಿರ್ವಹಿಸುತ್ತಿವೆ, ಆದರೆ ಸರ್ಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಹೀಗಾಗಿ ಮಿಷನ್ ವಾತ್ಸಲ್ಯ ಯೋಜನೆಯನ್ನು ಕಾಯಂ ಮಾಡಿ ಅನುದಾನ ಹೆಚ್ಚಿಸಬೇಕು. ಅನಾಥ, ಪರಿತ್ಯಕ್ತ ಮತ್ತು ಸಂಕಷ್ಟದಲಿರುವ ಮಕ್ಕಳ ರಕ್ಷಣೆಗಾಗಿ ದುಡಿಯುವ ಸಿಬ್ಬಂದಿ ಕಾಯಂ ಸ್ವರೂಪದ ಜವಾಬ್ದಾರಿ ಹಾಗೂ ಶಾಸನ ಬದ್ಧ ಕರ್ತವ್ಯಗಳನ್ನು ನಿರ್ವಹಿಸಬೇಕಿರುವುದರಿಂದ ಹಾಲಿ ಯೋಜನೆಯಡಿ ದುಡಿಯುತ್ತಿರುವ ಸಿಬ್ಬಂದಿಯನ್ನು ತಕ್ಷಣ ವಿಮೆಗೆ ಬದಲಿಸಿ ಮುಂದುವರೆಸುವುದು ಹಾಗೂ ವೇತನವನ್ನು ಸರ್ಕಾರವೇ ನೇರವಾಗಿ ನೀಡಬೇಕು.

ಪ್ರಸ್ತುತ ನೀಡುತ್ತಿರುವ ವೇತನವು ಕಡಿಮೆ ಇದ್ದು, ಸುಪ್ರೀಂ ಕೋರ್ಟ್ ತೀರ್ಪಿನಂತೆ ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿಮಾಡಬೇಕು ಎಂದು ಆಗ್ರಹಿಸಿದರು.

ಚೈಲ್ಡ್ ಲೈನ್ ಸಿಬ್ಬಂದಿಗೆ ಪ್ರಸ್ತುತ ನೀಡುತ್ತಿರುವ ವೇತನವು ಕನಿಷ್ಟ ವೇತನಕಿಂತಲೂ ಕಡಿಮೆ ಇದ್ದು ಪರಿಷ್ಕೃತ ಕನಿಷ್ಟ ವೇತನ ಜಾರಿ ಮಾಡಬೇಕು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಆಪ್ತ ಸಮಾಲೋಚಕರಿಗೆ ಸಿಸಿಐ ಆಪ್ತ ಸಮಾಲೋಚಕರಿಗಿಂತಲೂ ಕಡಿಮೆ ವೇತನ ನಿಗದಿ ಪಡಿಸಿರುವುದನ್ನು ಸರಿಪಡಿಸುವುದು, ಕಚೇರಿಯ ಡಿ ಗ್ರೂಪ್ ಸಿಬ್ಬಂದಿಗೆ ಕನಿಷ್ಟವೇತನದ ಅನ್ವಯ ವೇತನ ನಿಗದಿ ಪಡಿಸಬೇಕೆಂದರು. ಮಕ್ಕಳ ಪಾಲನಾ ಸಂಸ್ಥೆಗಳ ಸಿಬ್ಬಂದಿ ವೇತನದಲ್ಲಿ ಕಡಿತಮಾಡಿರುವ ಜಿ.ಎಸ್.ಟಿ, ಸೇವಾ ತೆರಿಗೆಯನ್ನು ಸಿಬ್ಬಂದಿಗೆ ವಾಪಸ್ ಮಾಡುವುದು.

ಎಲ್ಲಾ ಮಹಿಳಾ ಸಿಬ್ಬಂದಿಗೆ ವೇತನ ಸಹಿತ ಹೆರಿಗೆ ರಜೆ ನೀಡುವುದು. ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಸಿಬ್ಬಂದಿ 13 ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದು, ಕಾಯಂ ಮಾಡಲು ನಿಯಮ ರೂಪಿಸಬೇಕು ಎಂದು ಮನವಿ ಮಾಡಿದರು. ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ 10 ಲಕ್ಷದ ಅಪಘಾತ, ಚಿಕಿತ್ಸೆ ಮತ್ತು ಮರಣಕ್ಕೆ ವಿಮೆ ಸೌಲಭ್ಯ ಕಲ್ಪಿಸಬೇಕೆಂದರು. ಈ ವೇಳೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದಿಲೀಪ್ ಕೆ.ಜಿ. ಎಲ್‌ಪಿಒ ಸರಸ್ವತಿ, ರಕ್ಷಣಾಧಿಕಾರಿ ಶಿವಣ್ಣ, ಸಿಬ್ಬಂದಿಗಳಾದ ಕವಿತಾ, ಶಶಿಕಲಾ, ಬಾಲಮಂದಿರದ ಸರಸ್ವತಿ, ಇಂದಿರಾ ಮೊದಲಾದವರಿದ್ದರು.

# ಮಾಜಿ ಸಚಿವ ಬಿ ಶಿವರಾಂಗೆ ಸನ್ಮಾನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು : ಹಾಸನ ನಗರದ ಪ್ರತಿಷ್ಠಿತ ವೈದ್ಯಕೀಯ ಶಿಕ್ಷಣ ಸಂಸ್ಥೆಯಾದ ಹಿಮ್ಸ್ ನ ಆಡಳಿತ ಪರಿಷತ್‌ಗೆ ಯುವ ನಾಯಕ ರವೀಶ್ ಬಸವಾಪುರ ಅವರನ್ನು ನಾಮನಿರ್ದೇಶಿತ ಸದಸ್ಯರಾಗಿ ನೇಮಿಸಿದ ಹಿನ್ನಲೆ ಬಿ.ಶಿವರಾಂ ಅವರು ಬೇಲೂರು ಪಟ್ಟಣದ ಕಾಂಗ್ರೆಸ್ ಕಚೇರಿಗೆ ಆಗಮಿಸಿ ಮಾಜಿ ಸಚಿವ ಬಿ ಶಿವರಾಂ ಅವರನ್ನು ಸನ್ಮಾನಿಸಿದರು.

ಈ ವೇಳೆ ಮಾತನಾಡಿದ ಮಾಜಿ ಸಚಿವ ಬಿ ಶಿವರಾಂ ರವೀಶ್ ಬಸವಾಪುರ ಅವರು ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಉಪಾಧ್ಯಕ್ಷರಾಗಿ ಸಕ್ರಿಯರಾಗಿದ್ದ ಉತ್ತಮ ಕಾರ್ಯನಿರ್ವಹಣೆ ಮಾಡಿರುತ್ತಾರೆ.

ತಮ್ಮ ಸಾರ್ವಜನಿಕ ಜೀವನದಲ್ಲಿ ಯುವ ಕಾಂಗ್ರೆಸ್ ನಲ್ಲಿ ಕಳೆದ ಹಲವು ವರ್ಷಗಳಿಂದ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವ ರವೀಶ್ ಬಸವಾಪುರ, ಸಮಾಜ ಸೇವೆಯಲ್ಲಿಯೂ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಯುವಕರ ಸ್ಪೂರ್ತಿಯಾಗಿರುವ ಇವರು

ಇವರ ಕಾರ್ಯಚಟುವಟಿಕೆ ಗಮನಿಸಿ ರವೀಶ್ ಅವರನ್ನು ಮುಂದಿನ ಮೂರು ವರ್ಷಗಳ ಅವಧಿಗೆ ಈ ಹುದ್ದೆಗೆ ನೇಮಿಸಿ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಗಳು ಆದೇಶ ಹೊರಡಿಸಿದ್ದಾರೆ. ಹಿಮ್ಸ್ ನ ಆಡಳಿತ ಮಂಡಳಿಗೆ ಯುವ ನಾಯಕನ ಆಗಮನವು ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಹೊಸ ಹುರುಪು ನೀಡುವ ನಿರೀಕ್ಷೆಯಿದೆ ಎಂದರು

# ಇತಿಹಾಸದಲ್ಲಿ ಈ ದಿನ

## ಮೇ -23

**1984** ಭಾರತದಲ್ಲಿ ಮೊದಲ ಬಾರಿಗೆ ಭೋಪಾಲ್ ವಿಷಾನಿಲ ದುರಂತದ ಬಗ್ಗೆ ಕೇಂದ್ರ ಸರ್ಕಾರದ ತನಿಖಾ ಸಮಿತಿ ಕಾರ್ಯಾರಂಭಿಸಿತು.

**1999** ಕಾರ್ಗಿಲ್ ಯುದ್ಧದ ಆರಂಭಿಕ ಹಂತಗಳು: ಪಾಕಿಸ್ತಾನಿ ಸೈನಿಕರು ಮತ್ತು ಉಗ್ರರು ಕಾರ್ಗಿಲ್ ಪ್ರದೇಶದಲ್ಲಿ ಭಾರತದ ಮೇಲ್ವಿಚಾರಣೆಯಲ್ಲಿರುವ ನೆಲವನ್ನು ಅಕ್ರಮವಾಗಿ ಪ್ರವೇಶಿಸಿದ್ದ ಬಗ್ಗೆ ಭಾರತಕ್ಕೆ ಖಚಿತ ಮಾಹಿತಿ ಲಭಿಸಿತು.

**2009** ಡಾ. ಮನಮೋಹನ್ ಸಿಂಗ್ ಅವರು ಎರಡನೇ ಬಾರಿ ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

### ಜನ್ಮ ದಿನಗಳು

**1909** ಮಹಾ ದೇವ್ ಗೋವಿಂದ ರಾನಡೆ

ಒಬ್ಬ ಪ್ರಸಿದ್ಧ ನ್ಯಾಯಾಧೀಶರು, ಸಾಮಾಜಿಕ ಸುಧಾರಕರು ಮತ್ತು ಭಾರತದ ನ್ಯಾಯ ವ್ಯವಸ್ಥೆಯಲ್ಲಿ ಮಹತ್ವದ ವ್ಯಕ್ತಿತ್ವ.

**1934** ರಾಜೇಶ್ ಖನ್ನಾ: ಹಿಂದಿ ಚಿತ್ರರಂಗದ ಮೊದಲ ಸೂಪರ್ ಸ್ಟಾರ್ ನಟ.

**1949** ಕಿಸಾನ್ ಬಾಬುರಾವ್ ಹಜಾರೆ (ಅಣ್ಣಾ ಹಜಾರೆ): ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತರು ಮತ್ತು ಭ್ರಷ್ಟಾಚಾರ ವಿರೋಧಿ ಹೋರಾಟಗಾರರು.

### ಮರಣ ದಿನಗಳು

**2017** ಇಸ್ಮಾಯಿಲ್ ಪಟೇಲ್: ಭಾರತ ಸರ್ಕಾರದ ಪ್ರಮುಖ ಮುಸ್ಲಿಂ ನಾಯಕ, ಸಮಾಜ ಸೇವಕರಾಗಿದ್ದರು.

**2021** ಬಿ.ವಿ. ಲಕ್ಷ್ಮಣ್: ಕರ್ನಾಟಕದ ಹಿರಿಯ ರಾಜಕಾರಣಿ ಮತ್ತು ವಿಧಾನ ಪರಿಷತ್ತಿನ ಸದಸ್ಯ.

# ಮುಂಬಾಗಿಲು ಮುರಿದು ಆಭರಣ ಕಳವು

ಹಾಸನ: ಮನೆಯ ಡೋರ್ ಲಾಕ್ ಮುರಿದು ಮನೆಯಲ್ಲಿದ್ದ ಸುಮಾರು 1.05 ಲಕ್ಷ ರೂ ಬೆಲೆಯ ಚಿನ್ನದ ಆಭರಣ ಹಾಗೂ 75 ಸಾವಿರ ನಗದು ದೋಚಿ ಪರಾರಿಯಾಗಿರುವ ಘಟನೆ ಕಸಬಾ ಹೋಬಳಿ ಆಡುವಳ್ಳಿಯಲ್ಲಿ ನಡೆದಿದೆ.

ಗ್ರಾಮದ ರಾಧಾ ಮತ್ತು ಅವರ ಮಕ್ಕಳು ಮೇ 20ರಂದು ಬೆಳಿಗ್ಗೆ 10 ಗಂಟೆಗೆ ಗಂಡಸಿ ಹತ್ತಿರ ಇರುವ ತೋಟದ ಕೆಲಸಕ್ಕೆಂದು ಹೋಗಿದ್ದರು. ಕೆಲಸ ಮುಗಿಸಿ ವಾಪಸ್ ಸಂಜೆ 6.30 ಗಂಟೆಗೆ ಮನೆ ಬಳಿಗೆ ಬಂದಾಗ ಮುಂದಿನ ಬಾಗಿಲ ಬೀಗ ಮುರಿದಿತ್ತು.

ಆತಂಕದಿಂದ ಒಳಗೆ ಹೋಗಿ ನೋಡಿದಾಗ ಕಳ್ಳರು ಮನೆಯ ಡೋರ್ ಲಾಕ್ ಮುರಿದು ಮನೆಯ ಒಳಗೆ ಬೀರುವಿನಲ್ಲಿಟ್ಟಿದ್ದ 8 ಗ್ರಾಂ.ತೂಕದ ಚಿನ್ನದ ಓಲೆ ಹ್ಯಾಂಗಿಂಗ್ಸ್ , 3 ಗ್ರಾಂ ತೂಕದ ಚಿನ್ನದ ಒಂದು ಜೊತೆ ಓಲೆ, 10 ಗ್ರಾಂ ತೂಕದ ಒಂದು ಚಿನ್ನದ ಸರ ಹಾಗೂ 75 ಸಾವಿರ ನಗದು ಕಳವು ಮಾಡಿಕೊಂಡು ಹೋಗಿದ್ದಾರೆ. ಈ ಸಂಬಂಧ ನಗರದ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248